**ಕರ್ನಾಟಕ ಸರ್ಕಾರ**

**ಆರ್ಥಿಕ ಇಲಾಖೆ**

**ಆಯವ್ಯಯ**

**ಮೊದಲ ಆದ್ಯತೆ**

ಕರ್ನಾಟಕ ಸರ್ಕಾರದ ಸಚಿವಾಲಯ,
ಕೊಠಡಿ ಸಂಖ್ಯೆ:257,ವಿಧಾನ ಸೌಧ,

ಸಂಖ್ಯೆ: ಆಇ 11 ಬಿಪಿಇ 2014 ಬೆಂಗಳೂರು, ದಿ:30ನೇ ಆಕ್ಟೋಬರ್, 2014.

# ಸುತ್ತೋಲೆ

ವಿಷಯ :- 2015-16ನೇ ಸಾಲಿನ ವೆಚ್ಚ ಅಂದಾಜುಗಳ ತಯಾರಿಕೆಯ ಬಗ್ಗೆ
(ಅನುಬಂಧ 'ಬಿ' ಹೊರತುಪಡಿಸಿ)

* * *

2015-16 ನೇ ಸಾಲಿಗಾಗಿ / ಆಯವ್ಯಯ ಅಂದಾಜುಗಳ ತಯಾರಿಕೆಯ ಬಗ್ಗೆ ದಿನಾಂಕ:20-10-2014ರ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ ಆಇ 08 ಬಿಪಿಇ 2014 ರಲ್ಲಿ ಹೊರಡಿಸಿದ ಆಯವ್ಯಯ ದಿನಾಂಕ ಪಟ್ಟಿಯತ್ತ ಗಮನ ಸೆಳೆಯಲಾಗಿದೆ. 2014-15ನೇ ಸಾಲಿನ ಆಯವ್ಯಯ ಅಂದಾಜುಗಳ ಮತ್ತು 2014-15ನೇ ಸಾಲಿನ ಪರಿಷ್ಕೃತ ಅಂದಾಜುಗಳ ಹಾಗೂ 2014-15ನೇ ಸಾಲಿನ ಪರಿಷ್ಕೃತ ಅಂದಾಜುಗಳ ಮತ್ತು 2015-16ರ ಆಯವ್ಯಯ ಅಂದಾಜುಗಳ ನಡುವಣ ವ್ಯತ್ಯಾಸಗಳನ್ನು ವಿವರಿಸಲು ನಮೂನೆಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ. ಈ ಅನುಬಂಧದ ಅವಶ್ಯವಿರುವ ಪ್ರತಿಗಳನ್ನು ಅಂದಾಜುಗಳನ್ನು ತಯಾರಿಸುವ ಅಧಿಕಾರಿಗಳು ತಾವೇ ತಯಾರಿಸಿಕೊಳ್ಳತಕ್ಕದ್ದು.

2. ಆಯವ್ಯಯ ತಯಾರಿಕೆ ಸಂಬಂಧದಲ್ಲಿ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳನ್ನು ಅಂದಾಜುಗಳನ್ನು ತಯಾರಿಸುವ ಅಧಿಕಾರಿಗಳು ಎಂದು ಪರಿಗಣಿಸಲಾಗಿದೆ. ಮುಖ್ಯ ಲೆಕ್ಕ ಶೀರ್ಷಿಕೆವಾರು ಅಂದಾಜುಗಳನ್ನು ಬೆರಳಚ್ಚು/ಗಣಕ ಯಂತ್ರಗಳ ಮೂಲಕ ತಯಾರಿಸಬೇಕೆಂದು ಕೋರಿದೆ. ಬದಲಾವಣೆಗಳಿಗೆ ಕಾರಣಗಳನ್ನು ಹಾಗೂ ಪ್ರತಿಯೊಂದು ಕಾರ್ಯಕ್ರಮಗಳಿಗೆ ಸವಿವರ ಶೀರ್ಷಿಕೆಗಳ ಹಂತದವರೆವಿಗೆ 2014-15 ಪರಿಷ್ಕೃತ ಅಂದಾಜುಗಳು ಮತ್ತು 2015-16ರ ಆಯವ್ಯಯ ಅಂದಾಜುಗಳನ್ನು ಒದಗಿಸಬೇಕೆಂದು ತಿಳಿಸಲಾಗಿದೆ. ಪ್ರತಿಯೊಂದು ಮುಖ್ಯ ಲೆಕ್ಕ ಶೀರ್ಷಿಕೆಗೂ ಪ್ರತ್ಯೇಕ ಹಾಳೆಗಳನ್ನು ಉಪಯೋಗಿಸುವುದು.

3. ಹಿಂದಿನ ವರ್ಷಗಳ ವಾಸ್ತವಿಕ ವೆಚ್ಚ, ಪ್ರಸಕ್ತ ವರ್ಷದ ಮೊದಲ ಆರು ತಿಂಗಳ ವಾಸ್ತವಿಕ ವೆಚ್ಚ, ಉಳಿದ ಆರು ತಿಂಗಳ ಸಂಭಾವ್ಯ ವೆಚ್ಚಕ್ಕೆ ಸಂಬಂಧಿಸಿದಂತೆ ಪ್ರಸಕ್ತ ವರ್ಷದ ಪರಿಷ್ಕೃತ ಅಂದಾಜುಗಳನ್ನು ರಚಿಸಲು, ಅಂದಾಜುಗಳನ್ನು ತಯಾರಿಸುವ ಅಧಿಕಾರಿಗಳನ್ನು ಕೋರಲಾಗಿದೆ. 2014-15 ನೇ ಸಾಲಿನ ಆಯವ್ಯಯ ಅಂದಾಜುಗಳ ಮತ್ತು 2014-15 ಸಾಲಿನ ಪರಿಷ್ಕೃತ ಅಂದಾಜುಗಳ ನಡುವಣ ವ್ಯತ್ಯಾಸಗಳನ್ನು ವಿವರಿಸಬೇಕು. ಎಲ್ಲಿ ಏರಿಕೆಗಳಿಗೆ ಸರ್ಕಾರ ಅನುಮತಿ ನೀಡಿದೆಯೋ ಅಂತಹ ಪ್ರಕರಣಗಳಲ್ಲಿ ಏರಿಕೆಗಳನ್ನು ಮಂಜೂರು ಮಾಡಿದ / ಅಧಿಕಾರ ಹೊಂದಿದ ಸರ್ಕಾರಿ ಆದೇಶದ ಉಲ್ಲೇಖವನ್ನು ತಪ್ಪದೇ ಸೂಚಿಸಬೇಕು.

4. 2015-16 ನೇ ಸಾಲಿಗಾಗಿ ಉದ್ದೇಶಿಸಲಾದ ಅಂದಾಜುಗಳು ಹಿಂದಿನ ವರ್ಷಗಳ ವಾಸ್ತವಿಕಗಳ ಮೇಲೆ ಮತ್ತು 2014-15ನೇ ಸಾಲಿಗೆ ಪ್ರಸ್ತಾವಿಸಿದ ಪರಿಷ್ಕೃತ ಅಂದಾಜುಗಳ ಮೇಲೆ ಆಧಾರಿತವಾಗಿರಬೇಕು. 2014-15ನೇ ಸಾಲಿನ ಪರಿಷ್ಕೃತ ಅಂದಾಜುಗಳು ಮತ್ತು 2015-16 ನೇ ಸಾಲಿನ ಆಯವ್ಯಯ ಅಂದಾಜುಗಳ ನಡುವಣ ವ್ಯತ್ಯಾಸಗಳನ್ನು ವಿವರಿಸಬೇಕು. ವ್ಯತ್ಯಾಸಗಳಿಗೆ ಕಾರಣಗಳನ್ನು ನಿರ್ದಿಷ್ಟವಾಗಿ ತಿಳಿಸಬೇಕು ಮತ್ತು ಮಿತವ್ಯಯ ವ್ಯವಸ್ಥೆಯನ್ನು ಜಾರಿಗೊಳಿಸುವುದಕ್ಕೆ

ಸಂಬಂಧಿಸಿದಂತೆ ಕಾಲಕಾಲಕ್ಕೆ ಜಾರಿಯಲ್ಲಿರುವ ಸೂಚನೆಗಳನ್ನು ಮತ್ತು ಮಿತವ್ಯಯದ ಸಲುವಾಗಿರುವ ಸಾಮಾನ್ಯ ಅಗತ್ಯತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಅದರಲ್ಲೂ ಯೋಜನೇತರ ಬಾಬುಗಳ ಮೇರೆಗಿನ ಅವಶ್ಯಕವಾದ ಅತಿ ಕನಿಷ್ಟ ಅಗತ್ಯತೆಗಳನ್ನು ಮಾತ್ರ ಒದಗಿಸಬೇಕು. ಅಂದಾಜುಗಳನ್ನು ತಯಾರಿಸುವ ಮತ್ತು ನಿಯಂತ್ರಣಾಧಿಕಾರಿಗಳು ಈ ವಿಷಯದ ಬಗ್ಗೆ ವೈಯಕ್ತಿಕ ಗಮನವನ್ನು ನೀಡತಕ್ಕದ್ದು.

5. ಹೆಚ್ಚುವರಿ ಏರ್ಪಾಟನ್ನು ಪರಿಷ್ಕೃತ ಅಂದಾಜುಗಳಲ್ಲಿ ಸೇರಿಸಿದ ಮಾತ್ರಕ್ಕೆ ಹೆಚ್ಚಿನ ವೆಚ್ಚವನ್ನು ಭರಿಸುವ ಯಾವುದೇ ಅಧಿಕಾರವನ್ನು ಅದು ಹೊಂದಿರುವುದಿಲ್ಲವಾದ್ದರಿಂದ ಇಲಾಖೆಗಳು, ತಮಗೆ ಅಗತ್ಯವಿರುವಂಥ ಪೂರಕ ಅನುದಾನಗಳನ್ನು ಅಥವಾ ಪುನರ್ವಿನಿಯೋಗಗಳನ್ನು ಪಡೆಯುವಲ್ಲಿ ತಮ್ಮ ಹೊಣೆಯನ್ನು ಬಿಟ್ಟುಬಿಡುವಂತಿಲ್ಲವೆಂದೂ, ಇಲ್ಲವೇ ಪರಿಷ್ಕೃತ ಅಂದಾಜುಗಳು, ಹೆಚ್ಚಿನ ಹಂಚಿಕೆಗಳ ಅರ್ಜಿಗಾಗಿ ಸೂಕ್ತ ಮಾರ್ಗವಲ್ಲವೆಂದೂ ಗಮನಿಸಬಹುದು. ಆದ್ದರಿಂದ, ಪ್ರತ್ಯೇಕ ಪ್ರಸ್ತಾವಗಳನ್ನು ಆರ್ಥಿಕ ಇಲಾಖೆಯಲ್ಲಿ ಸ್ವೀಕರಿಸದ ಹೊರತು ಪುನರ್ವಿನಿಯೋಗವನ್ನು ಅಥವಾ ಪೂರಕ ಅನುದಾನಗಳನ್ನು ಮಂಜೂರು ಮಾಡಲಾಗುವುದಿಲ್ಲ.

6. ಯಾವ ನಿರೀಕ್ಷಿತ ಉಳಿತಾಯಗಳು ಅದೇ ಅನುದಾನದ ಇತರ ಶೀರ್ಷಿಕೆಗಳ ಹೆಚ್ಚುವರಿ ವೆಚ್ಚವನ್ನು ಭರಿಸಲು ಅಗತ್ಯವಾಗಿರುವುದಿಲ್ಲವೋ, ಅಂತಹವುಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಮತ್ತು ಪ್ರಸಕ್ತ ಆರ್ಥಿಕ ವರ್ಷಕ್ಕಾಗಿ, ಪರಿಷ್ಕೃತ ಅಂದಾಜುಗಳನ್ನು ನಿಗದಿಪಡಿಸುವ ಸಂದರ್ಭದಲ್ಲಿ ಅಂತಹ ಉಳಿತಾಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಯಾವುದೇ ಸಂದರ್ಭದಲ್ಲೂ ಅಂತಹ ಉಳಿತಾಯವನ್ನು ಅನುದಾನವು ರದ್ದಾಗಿ ಹೋಗುವುದನ್ನು ತಡೆಯಲು ಇಲಾಖೆಯ ವೈಯಕ್ತಿಕ ಠೇವಣಿ ಖಾತೆಯಲ್ಲಿ ತೊಡಗಿಸಬಾರದು. ಅಂತಹ ಆಕಸ್ಮಿಕಗಳು ಬಂದಲ್ಲಿ, ಆರ್ಥಿಕ ಇಲಾಖೆಯಲ್ಲಿ ಸರ್ಕಾರದ ನಿರ್ದಿಷ್ಟ ಆದೇಶವನ್ನು ಪಡೆಯಬೇಕು.

7. **ಆಯವ್ಯಯದ ನಿಖರತೆ**.- ಅಗತ್ಯವಾಗಿ ಬೇಕಾಗಿರುವುದಕ್ಕಿಂತ ಹೆಚ್ಚು ಮೊತ್ತವನ್ನು ಆಯವ್ಯಯದ ಏರ್ಪಾಟಿನಲ್ಲಿ ಸೇರಿಸಿರುವ ಕಾರಣದಿಂದಾಗಲೀ ಅಥವಾ ಆಯವ್ಯಯದಲ್ಲಿ ಉಪಬಂಧಿಸಲಾದ ಯೋಜನೆಗಳನ್ನು ಕಾರ್ಯಾನ್ವಯಗೊಳಿಸದೇ ಇರುವ ಕಾರಣದಿಂದಾಗಲೀ, ಗಮನಾರ್ಹವಾದ ಮೊಬಲಗನ್ನು ಈ ಹಿಂದೆ ಸರ್ಕಾರಕ್ಕೆ ಒಪ್ಪಿಸಿರುವ ಉದಾಹರಣೆಗಳು ಇವೆ. ಆರ್ಥಿಕ ವರ್ಷದ ಮೊದಲ ಮೂರು ತಿಂಗಳಿನಲ್ಲೇ ಇಲಾಖೆಗಳು ಮೂಲತಃ ನಿರೀಕ್ಷಿಸಿರದಂತಹ ಕೆಲವು ಬಾಬುಗಳಿಗೆ ಹೆಚ್ಚಿನ ನಿಧಿಗಳ ಏರ್ಪಾಟನ್ನು ಮಾಡಲು ಸರ್ಕಾರವನ್ನು ಕೇಳಿಕೊಂಡಿರುವ ಸಂದರ್ಭಗಳೂ ಇವೆ. ಕೇವಲ ಕೆಲವು ತಿಂಗಳುಗಳ ಅವಧಿಯಲ್ಲಿ ಇಡೀ ಆಯವ್ಯಯ ಏರ್ಪಾಟಿನಲ್ಲಿ ಹೆಚ್ಚಿನ ಭಾಗವನ್ನು ಇಲಾಖೆಗಳು ಖರ್ಚು ಮಾಡಿ, ಹೆಚ್ಚಿನ ನಿಧಿಗಾಗಿ ಆರ್ಥಿಕ ಇಲಾಖೆಯನ್ನು ಕೋರಿರುವ ಉದಾಹರಣೆಗಳೂ ಸರ್ಕಾರದ ಗಮನಕ್ಕೆ ಬಂದಿದೆ. ಅಂತಹ ಸಂದರ್ಭಗಳನ್ನು ತಡೆಗಟ್ಟಿ, ಆಯವ್ಯಯ ಅಂದಾಜುಗಳನ್ನು ಜಾಗರೂಕತೆಯಿಂದ, ಮುಂದಾಲೋಚನೆ ಮಾಡಿ ತಯಾರಿಸುವುದು ಅಗತ್ಯವಾಗಿದೆ. ಆದ್ದರಿಂದ ಪ್ರಸ್ತಾವಗಳು ಊಹಾತ್ಮಕ ಅಂದಾಜುಗಳ ಆಧಾರದ ಮೇಲೆ ಇರದೆ, ನಿಧಿಗಳ, ಸಂಭಾವ್ಯ ಮತ್ತು ವಾಸ್ತವಿಕ ಅಗತ್ಯತೆಗಳ ಆಧಾರದ ಮೇಲೆ ತಯಾರಿಸಿರಬೇಕು. ಈ ರೀತಿ ಮಾಡುವುದರಿಂದ ಆಯವ್ಯಯ ಅಂದಾಜುಗಳಲ್ಲಿ ಒದಗಿಸಿರುವ ಮೊತ್ತದ ಮತ್ತು ವಾಸ್ತವ ವೆಚ್ಚದ ನಡುವೆ ಬೃಹತ್ ಪ್ರಮಾಣದಲ್ಲಾಗುವ ವ್ಯತ್ಯಾಸಗಳನ್ನು ತಪ್ಪಿಸಿದಂತಾಗುತ್ತದೆ. ಆಯವ್ಯಯದಲ್ಲಿ ನಮೂದಿಸಿರುವ ಮೊತ್ತವನ್ನು ಆರ್ಥಿಕ ವರ್ಷದ ಎಲ್ಲಾ ತಿಂಗಳೂ ಸಮನಾಗಿ ವೆಚ್ಚ ಮಾಡಬೇಕು ಮತ್ತು ಆರ್ಥಿಕ ವರ್ಷದ ಕೊನೆಯ ಮೂರು ತಿಂಗಳ ಅವಧಿಯಲ್ಲಿ ವೆಚ್ಚವು ವಿಪರೀತವಾಗಿರಕೂಡದು.

8. 2015-16ನೇ ವರ್ಷವು 12ನೇ ಪಂಚವಾರ್ಷಿಕ ಯೋಜನೆಯ ನಾಲ್ಕನೇ ವರ್ಷವಾಗಿದೆ.

9. **ಆಯವ್ಯಯ ನಿಯಂತ್ರಣವನ್ನು** ಖಜಾನೆಗಳ ಮೂಲಕ ಜಾರಿಗೊಳಿಸಿರುವುದನ್ನು ಗಮನಿಸತಕ್ಕದ್ದು. ಆದ್ದರಿಂದ ವೆಚ್ಚದ ಮೇಲಿನ ಎಲ್ಲಾ ಬಾಬ್ತುಗಳನ್ನು ಸರಿಯಾದ ಲೆಕ್ಕ ಶೀರ್ಷಿಕೆಗಳಡಿ ವರ್ಗೀಕರಿಸತಕ್ಕದ್ದು. ಹಾಗೇ ವರ್ಗೀಕರಿಸದಿದ್ದಲ್ಲಿ, ಅಂತಹ ಬಿಲ್ಲುಗಳನ್ನು ಖಜಾನೆಗಳು ಮಾನ್ಯ ಮಾಡುವುದಿಲ್ಲ.

10. ಯೋಜನಾ ಇಲಾಖೆಯು 2015-16 ನೇ ಸಾಲಿನ ರಾಜ್ಯ ಯೋಜನೆಗಳ ವಲಯವಾರು ವೆಚ್ಚವನ್ನು ತಿಳಿಸಿದ ಕೂಡಲೇ ಕಾರ್ಯ ಯೋಜನಾ ವಿಂಗಡಣೆಗಳನ್ನು ತಯಾರಿಸುವುದು. ಪ್ರತಿ ಯೋಜನೆಯ ಎದುರಾಗಿ ರಾಜ್ಯ ಭಾಗ ಮತ್ತು ಕೇಂದ್ರ ಪುರಸ್ಕೃತ / ಕೇಂದ್ರ ವಲಯ ಭಾಗಗಳನ್ನು ವಿಶಿಷ್ಟವಾಗಿ ತೋರಿಸಬೇಕು. ಯೋಜನೆಯ ಮಾರ್ಗಸೂಚಿಗಳನುಸಾರವಾಗಿ ಕೇಂದ್ರ ಪುರಸ್ಕೃತ / ಕೇಂದ್ರ ವಲಯ ಯೋಜನೆಗಳಿಗೆ ನಿಖರವಾಗಿ ಮೊತ್ತವನ್ನು ಒದಗಿಸಬೇಕು. **ಅದನ್ನು, ಯೋಜನಾ**

**ಇಲಾಖೆಯು ವಲಯವಾರು ವೆಚ್ಚದ ಅಂದಾಜುಗಳನ್ನು ತಿಳಿಸಿದ 5 ದಿನಗಳೊಳಗಾಗಿ ಆರ್ಥಿಕ ಇಲಾಖೆಗೆ ಸಲ್ಲಿಸುವುದು. ಆರ್ಥಿಕ ಇಲಾಖೆಯಿಂದ ಈ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ಸೂಚನೆಗಳನ್ನು ನೀಡುವುದಿಲ್ಲ.**

11. ನಿರ್ವಹಣಾ ಮುಖ್ಯ ಶೀರ್ಷಿಕೆಯಡಿ ಎಲ್ಲಾ ವಿಶೇಷ ಘಟಕ ಯೋಜನೆ / ಗಿರಿಜನ ಉಪಯೋಜನೆಗೆ ಒದಗಿಸಲಾಗುವ ಮೊತ್ತಗಳನ್ನು 786-ವಿಶೇಷ ಘಟಕ ಯೋಜನೆ ಮತ್ತು 796-ಗಿರಿಜನ ಉಪ ಯೋಜನೆ ಅಡಿ ಹಾಗೂ ಉದ್ದೇಶ / ವಿವರವಾದ ಶೀರ್ಷಿಕೆ 422 ಮತ್ತು 423 ರಡಿ ಕ್ರಮವಾಗಿ ವರ್ಗೀಕರಿಸಬೇಕು.

12. <u>ಹೊಸ ಯೋಜನೆಗಳ ಆಯವ್ಯಯ ಪೂರ್ವ ಪರಿಶೀಲನೆ</u>:- ಸಚಿವಾಲಯದ ಬಹುತೇಕ ಇಲಾಖೆಗಳಲ್ಲಿ ಆಂತರಿಕ ಆರ್ಥಿಕ ಸಲಹೆಗಾರರ ಪದ್ಧತಿಯನ್ನು ಜಾರಿಗೊಳಿಸಿದೆ. ಹೊಸ ಯೋಜನೆಗಳ ಆಯವ್ಯಯ ಪೂರ್ವ ಪರಿಶೀಲನೆ ಮಾಡುವುದು ಆಂತರಿಕ ಆರ್ಥಿಕ ಸಲಹೆಗಾರರ ಮುಖ್ಯ ಕೆಲಸಗಳಲ್ಲಿ ಒಂದಾಗಿದೆ. ಈ ಪದ್ಧತಿಯು ಬಹಳ ವರ್ಷಗಳಿಂದ ಜಾರಿಯಲ್ಲಿದ್ದರೂ, ಆಯವ್ಯಯ ಪೂರ್ವ ಪರಿಶೀಲನೆಗಾಗಿ ಆಯವ್ಯಯ ಪ್ರಸ್ತಾವನೆಗಳನ್ನು ಇಲಾಖಾ ಮುಖ್ಯಸ್ಥರುಗಳು ಒದಗಿಸುತ್ತಿಲ್ಲ. ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯು ಆಯವ್ಯಯ ಪೂರ್ವ ಪರಿಶೀಲನೆಯ ಅಗತ್ಯವನ್ನು ಮತ್ತು ಅದನ್ನು ಜಾರಿಗೆ ತರಲು ಆಗಿಂದಾಗ್ಗೆ ಆರ್ಥಿಕ ಇಲಾಖೆಯ ಗಮನಕ್ಕೆ ತರುತ್ತಿದೆ. 2015-16ನೇ ಸಾಲಿನಲ್ಲಿ ಕಾರ್ಯರೂಪಗೊಳಿಸಲಿರುವ ಹೊಸ ಕಟ್ಟಡಗಳನ್ನೊಳಗೊಂಡಂತೆ ಹೊಸ ಯೋಜನಾ ಕಾರ್ಯಕ್ರಮಗಳ ಬಗ್ಗೆ ಆಯವ್ಯಯ ಅಂದಾಜುಗಳನ್ನು ಕಳುಹಿಸುವ ಮುನ್ನ ನಿಗದಿತ ಸಮಯದಲ್ಲಿ ಇಲಾಖಾ ಮುಖ್ಯಸ್ಥರುಗಳು ಆಯವ್ಯಯ ಪೂರ್ವ ಪರಿಶೀಲನೆಗಾಗಿ ಕಳುಹಿಸಬೇಕಾಗಿದೆ. ಈ ಕಾರಣಕ್ಕಾಗಿ ಇಲಾಖಾ ಮುಖ್ಯಸ್ಥರುಗಳು ಅಂತರಿಕ ಆರ್ಥಿಕ ಸಲಹೆಗಾರರನ್ನು ಹೊಂದಿರುವ ಇಲಾಖೆಗಳ ಸರ್ಕಾರದ ಕಾರ್ಯದರ್ಶಿಗಳಿಗೆ ಬರೆದು ನಂತರ ಆ ಅಂದಾಜುಗಳನ್ನು ಆಂತರಿಕ ಆರ್ಥಿಕ ಸಲಹೆಗಾರರು ಪರಿಶೀಲಿಸಿ, ಯೋಜನಾ ಇಲಾಖೆ ಮತ್ತು ಆರ್ಥಿಕ ಇಲಾಖೆಯ ಅನುಮತಿಗಾಗಿ ಮತ್ತು ಆಯವ್ಯಯದಲ್ಲಿ ಸೇರಿಸಲು ಕಳುಹಿಸಬೇಕಾಗಿದೆ. ಆಂತರಿಕ ಆರ್ಥಿಕ ಸಲಹೆಗಾರರ ಪದ್ಧತಿಯನ್ನು ಈವರೆಗೆ ಪ್ರಾರಂಭಿಸದೇ ಇರುವ ಇಲಾಖೆಗಳಲ್ಲಿ ಅಂದಾಜುಗಳನ್ನು ತಯಾರಿಸುವ ಅಧಿಕಾರಿಗಳು ಆಯವ್ಯಯ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ಸರ್ಕಾರದ ಕಾರ್ಯದರ್ಶಿಗಳಿಗೆ ಆಯವ್ಯಯ ಪೂರ್ವ ಪರಿಶೀಲನೆಗೆ 2014 ರ ನವೆಂಬರ್ 30 ನೇ ತಾರೀಖಿನೊಳಗೆ ಯಾವುದೇ ಬಾಬ್ತಿನ ಕಾರ್ಯಕ್ರಮಗಳನ್ನು ಕಳುಹಿಸತಕ್ಕದ್ದು. ಯೋಜನಾ ಹಂಚಿಕೆ ತಿಳಿಯದೇ ಇದ್ದರೂ ಸಹ ಈ ರೀತಿಯ ಆಯವ್ಯಯ ಪೂರ್ವ ಪರಿಶೀಲನೆಯು ಮುಂದೆ ಪ್ರಸ್ತಾವನೆ : ಯೋಜನೆಯ ವಿವರವಾದ ಪರಿಶೀಲನೆಯನ್ನು ತಪ್ಪಿಸುತ್ತದೆ ಹಾಗೂ ಯೋಜನೆಯನ್ನು ಆರ್ಥಿಕ ವರ್ಷದ ಪ್ರಾರಂಭದಲ್ಲೇ ಕಾರ್ಯಗತಗೊಳಿಸಲು ಸಹಾಯಕವಾಗುತ್ತದೆ.

13. ಇಲಾಖೆಗಳ ವಿವಿಧ ಚಟುವಟಿಕೆಗಳಿಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದ್ದು, ಜಮೀನುಗಳ ಮಾಲೀಕರು ಹೆಚ್ಚಿನ ಪರಿಹಾರಕ್ಕಾಗಿ ನ್ಯಾಯಾಲಯಗಳ ಮೊರೆ ಹೋಗುವುದು ಸಾಮಾನ್ಯವಾಗಿದೆ. ನ್ಯಾಯಾಜ್ಞೆಗಳಂತೆ ಹಣವನ್ನು ಆದಷ್ಟು ತ್ವರಿತವಾಗಿ ಸಂದಾಯ ಮಾಡಬೇಕಾಗುತ್ತದೆ. ಜಿಲ್ಲಾ ಪಂಚಾಯತ್‌ಗಳು ಮತ್ತು ಸಂಬಂಧಪಟ್ಟ ರಾಜ್ಯ ವಲಯ ಇಲಾಖೆಗಳು ಅವರವರ ಇಲಾಖೆಗಳ ಪ್ರಕರಣಗಳನ್ನು ಅವಲಂಬಿಸಿ ನ್ಯಾಯಾಜ್ಞೆಗಳಂತೆ ವೆಚ್ಚವನ್ನು ಭರಿಸಲು ಸಾಕಷ್ಟು ಆಯವ್ಯಯ ಅವಕಾಶಗಳನ್ನು ಮಾಡಿಕೊಳ್ಳಬೇಕು. ನ್ಯಾಯಾಜ್ಞೆಗಳಂತೆ ಸಂದಾಯ ಮಾಡುವ ವೆಚ್ಚವನ್ನು ಸಂಚಿತ ನಿಧಿಯ "ಪ್ರಭೃತ" ಎಂದು ಪರಿಗಣಿಸತಕ್ಕದ್ದು.

14. ಕಟ್ಟಡಗಳ ಅಂದಾಜುಗಳ ಬಗ್ಗೆ ಈ ಕೆಳಕಂಡ ಸೂಚನೆಗಳನ್ನು ನೀಡಲಾಗಿದೆ:-

(ಅ) ಎಲ್ಲಾ ಕಟ್ಟಡಗಳಿಗೆ ತಗಲುವ ವೆಚ್ಚವನ್ನು "ಯೋಜನೆ" ಯಲ್ಲೇ ಒದಗಿಸಲಾಗುವುದು. ಕಂದಾಯ, ನ್ಯಾಯಾಂಗ, ಪೊಲೀಸ್, ವಾಣಿಜ್ಯ ತೆರಿಗೆ ಇತ್ಯಾದಿ ಅಭಿವೃದ್ಧಿಯೇತರ ಇಲಾಖೆಗಳೂ ಸೇರಿದಂತೆ ಎಲ್ಲಾ ಇಲಾಖೆಗಳು, ತಮ್ಮ ಇಲಾಖೆಯ ಕಟ್ಟಡಗಳಿಗೆ ಬೇಕಾಗುವ ಯೋಜನಾ ಹಂಚಿಕೆಗಳನ್ನು ಯೋಜನಾ ಇಲಾಖೆಯಿಂದ ಪಡೆದುಕೊಳ್ಳಬೇಕು. ಅಭಿವೃದ್ಧಿಯೇತರ ಇಲಾಖೆಗಳಿಂದಲೂ ಸಹ ಪ್ರಸ್ತಾವನೆಗಳನ್ನು ತರಿಸಿಕೊಳ್ಳಲು ಮತ್ತು ಅವಶ್ಯಕ ಅನುದಾನವನ್ನು ಯೋಜನಾ ಹಂಚಿಕೆಗಳಲ್ಲಿ ಒದಗಿಸಬೇಕೆಂದು ಯೋಜನಾ ಇಲಾಖೆಯನ್ನು ಕೋರಲಾಗಿದೆ.

(ಆ) ಇಲಾಖೆಗಳು ಕಟ್ಟಡಗಳಿಗಾಗಿ ತಮ್ಮ ಯೋಜನಾ ಹಂಚಿಕೆಯಲ್ಲಿ ಸಾಕಷ್ಟು ಮೊತ್ತವನ್ನು ಹಂಚತಕ್ಕದ್ದು. ಹಾಗೆ ಮಾಡುವಾಗ ಸಂಬಂಧಿತ ಇಲಾಖೆಯು ಈಗಾಗಲೇ ನಿರ್ಮಾಣ ಜಾರಿಯಲ್ಲಿರುವ ಕಟ್ಟಡಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು. ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳಿಗಾಗಿ ಸಾಕಷ್ಟು ಮೊತ್ತವನ್ನು ಹಂಚಿದ ನಂತರ

ಹೊಸ ಕಾಮಗಾರಿಗಳಿಗೆ ಹಣವನ್ನು ಒದಗಿಸಬೇಕು. ಮುಖ್ಯ ಅಭಿಯಂತರರು (ಸಂಪರ್ಕ ಮತ್ತು ಕಟ್ಟಡಗಳು) ಸಂಬಂಧಿತ ಇಲಾಖೆಗಳ ಮುಖ್ಯಸ್ಥರಿಗೆ 2014-15ರ ಪರಿಷ್ಕೃತ ಅಂದಾಜುಗಳೊಂದಿಗೆ ಪ್ರಗತಿಯಲ್ಲಿರುವ ಕಾಮಗಾರಿಗಳ ಪಟ್ಟಿಯನ್ನು ಒದಗಿಸತಕ್ಕದ್ದು. ಇಲಾಖಾ ಮುಖ್ಯಸ್ಥರುಗಳು ಯೋಜನೆಗಳಡಿಯಲ್ಲಿ ಇದಕ್ಕಾಗಿ ಅವಶ್ಯಕ ಮತ್ತು ಸಾಕಾಗುವಷ್ಟು ಮೊತ್ತವನ್ನು ಒದಗಿಸಿಕೊಳ್ಳಬೇಕು. ಕಾಮಗಾರಿಗಳ ಪಟ್ಟಿಯನ್ನು ಅಂದಾಜುಗಳೊಡನೆ ಯೋಜನಾ ಆಯವ್ಯಯ ಅಂದಾಜುಗಳೊಂದಿಗೆ ಆರ್ಥಿಕ ಇಲಾಖೆ : ಆಂತರಿಕ ಆರ್ಥಿಕ ಸಲಹೆಗಾರರಿಗೆ ಕಳುಹಿಸತಕ್ಕದ್ದು. ಸರ್ಕಾರವು ತೆಗೆದುಕೊಂಡ ತೀರ್ಮಾನಕ್ಕನುಸಾರವಾಗಿ, ಸಂಹಿತೆ ನಿಯಮಗಳಿಗನುಸಾರ ಕೆಲಸವನ್ನು ಪೂರೈಸುವಂತೆ ಸಾಕಷ್ಟು ಹಣದ ವ್ಯವಸ್ಥೆ ಮಾಡತಕ್ಕದ್ದು. ಯಾವುದೇ ಸಾಂಕೇತಿಕ ಹಂಚಿಕೆಗೆ ಅನುಮತಿಸಲಾಗುವುದಿಲ್ಲ.

15. ಕಟ್ಟಡಗಳು, ರಸ್ತೆಗಳು ಮತ್ತು ಸೇತುವೆಗಳು ಇತ್ಯಾದಿಗಳನ್ನು ಕಾರ್ಯಗತಗೊಳಿಸುವ ಸಂದರ್ಭದಲ್ಲಿ ಮುಖ್ಯ ಅಭಿಯಂತರರು (ಸಂಪರ್ಕ ಮತ್ತು ಕಟ್ಟಡಗಳು), ಆ ಕೆಲಸದ ಜವಾಬ್ದಾರರಾಗಿದ್ದು, ಸಕ್ಷಮ ಪ್ರಾಧಿಕಾರಗಳಿಂದ ಆಡಳಿತಾತ್ಮಕವಾಗಿ ಅನುಮೋದಿತವಾದ ಹಾಗೂ ತಾಂತ್ರಿಕವಾಗಿ ಮಂಜೂರಾತಿ ಪಡೆದ ಯೋಜನೆ ಮತ್ತು ಅಂದಾಜುಗಳ ಹೊರತು, ಅನುಬಂಧ "ಇ" ಯಲ್ಲಿ ಯಾವುದೇ ಹೊಸ ಕಾಮಗಾರಿಗಳನ್ನು ನಮೂದಿಸಿಲ್ಲವೆಂಬುದನ್ನು ಗಮನಿಸತಕ್ಕದ್ದು. ಪ್ರಗತಿಯಲ್ಲಿರುವ ಕಾಮಗಾರಿಗಳು ಮತ್ತು ಕಾರ್ಯಗತಗೊಳಿಸಲು ಉದ್ದೇಶಿಸಲಾದ ಹೊಸ ಕಾಮಗಾರಿಗಳ ನಡುವೆ ಆಯವ್ಯಯ ಹಂಚಿಕೆಯ ವಿಷಯದಲ್ಲಿ, ಪ್ರಗತಿಯ ವಿವಿಧ ಹಂತಗಳಲ್ಲಿ ಮುಂದುವರಿಯುತ್ತಿರುವ ಕಾಮಗಾರಿಗಳಿಗಾಗಿ ಅವುಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಮತ್ತು ಯಾವುದೇ ಪ್ರಕರಣದಲ್ಲಿ 2 ವರ್ಷದೊಳಗೆ ಪೂರ್ಣಗೊಳಿಸಲು ಸಾಕಷ್ಟು ಮೊತ್ತವನ್ನು ಪ್ರತ್ಯೇಕವಾಗಿಡಲಾಗಿದೆಯೇ ಎಂಬುದನ್ನು ಖಾತರಿಗೊಳಿಸಿಕೊಳ್ಳತಕ್ಕದ್ದು. ಅದರಂತೆ ಉಳಿದ ಕಾಮಗಾರಿ ವೆಚ್ಚದ ಶೇ. 40 ಮತ್ತು ಶೇ.60 ರಷ್ಟನ್ನು 2015-16 ಮತ್ತು 2016-17ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆ ಮಾಡುವುದು. ಇದಾದ ನಂತರವೇ, ಹೊಸ ಕಾಮಗಾರಿಗಳಿಗೆ ಅನುದಾನಗಳನ್ನು ಒದಗಿಸಲು ಉದ್ದೇಶಿಸಬೇಕು. ಈ ಉದ್ದೇಶಕ್ಕಾಗಿ ಒಂದು ಆದ್ಯತಾ ಪಟ್ಟಿಯನ್ನು ತಯಾರಿಸಿ, ಸರ್ಕಾರದ ಪರಿಶೀಲನೆಗೆ ಕಳುಹಿಸಬೇಕು.

16. 5.00 ಕೋಟಿ ರೂ.ಗಳಿಗಿಂತ ಕಡಿಮೆ ವೆಚ್ಚದ ಅಂದಾಜುಗಳ ಹೊಸ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮೊದಲನೆ ವರ್ಷ ಶೇ.40 ಮತ್ತು ಬೇಕಾಗಿರುವ ಉಳಿಕೆ ಶೇ.60 ರಷ್ಟು ಮೊತ್ತವನ್ನು 2ನೇ ವರ್ಷದಲ್ಲಿ ಒದಗಿಸುವ ಮೂಲಕ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. 5.00 ಕೋಟಿ ರೂ.ಗಳಿಗಿಂತ ಹೆಚ್ಚು ವೆಚ್ಚದ ಅಂದಾಜುಗಳ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮೊದಲನೆ ವರ್ಷದಲ್ಲಿ ಕನಿಷ್ಟ ಶೇ.30 ರಷ್ಟು ಮೊತ್ತದ ಆಯವ್ಯಯ ಅನುದಾನವನ್ನು ಒದಗಿಸಿಕೊಳ್ಳತಕ್ಕದ್ದು. ಶೇ.70 ರಷ್ಟರ ಉಳಿದ ವೆಚ್ಚವನ್ನು ಕಾರ್ಯರೂಪಕ್ಕೆ ತರುವ ವೇಳಾಪಟ್ಟಿಯಂತೆ ಮುಂದಿನ ಎರಡು ವರ್ಷಗಳಲ್ಲಿ ಒದಗಿಸಿಕೊಳ್ಳತಕ್ಕದ್ದು. ಸಾಂಕೇತಿಕ ಅನುದಾನ ಒದಗಿಸಿ, ಯಾವುದೇ ಕಾಮಗಾರಿಯನ್ನು ಅಪೆಂಡಿಕ್ಸ್-ಇ ನಲ್ಲಿ ಸೇರಿಸಕೂಡದು.

17. ಸಣ್ಣ ನೀರಾವರಿ ಕಾಮಗಾರಿಗಳ ಸಂಬಂಧವಾಗಿ, ಸಣ್ಣ ನೀರಾವರಿ ಮತ್ತು ಪಂಚಾಯತ್ ರಾಜ್ ತಾಂತ್ರಿಕ ಇಲಾಖೆಯ ಮುಖ್ಯ ಅಭಿಯಂತರರುಗಳು ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕವಾಗಿ ಅನುಮೋದಿತವಾದ ಕಾಮಗಾರಿಗಳನ್ನು ಮಾತ್ರ ಅನುಬಂಧ "ಇ" ನಲ್ಲಿ ಸೇರಿಸತಕ್ಕದ್ದು ಮತ್ತು ಅನುದಾನ ಒದಗಿಸತಕ್ಕದ್ದು. ನೀರಾವರಿ ಯೋಜನೆಯ ಹಂಚಿಕೆಯಿಂದ ಹೊಸ ಸಣ್ಣ ನೀರಾವರಿ ಕಾಮಗಾರಿಗಳಿಗಾಗಿ ಆಯವ್ಯಯದಲ್ಲಿ ಹಂಚಿಕೆಯನ್ನು ಮೀಸಲಿಡುವುದಕ್ಕೆ ಮೊದಲು, ಈಗಾಗಲೇ ಕಾರ್ಯಗತಗೊಳಿಸಲು ಉದ್ದೇಶಿಸಲಾದ ಮತ್ತು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳಿಗಾಗಿ ಅಗತ್ಯ ನಿಧಿಗಳನ್ನು ಒದಗಿಸಲು ಸಾಕಷ್ಟು ಎಚ್ಚರಿಕೆಯನ್ನು ತೆಗೆದುಕೊಳ್ಳತಕ್ಕದ್ದು.

18. ಈ ಅಂದಾಜುಗಳನ್ನು ತಯಾರಿಸುವಲ್ಲಿ ಇಲಾಖಾ ಮುಖ್ಯಸ್ಥರುಗಳು, ಪ್ರಾದೇಶಿಕ ಆಯುಕ್ತರುಗಳು, ಜಿಲ್ಲಾಧಿಕಾರಿಗಳು, ಮುಖ್ಯ ಇಂಜಿನಿಯರುಗಳು ಮತ್ತು ಇತರ ಅಂದಾಜು ತಯಾರಿಸುವ ಅಧಿಕಾರಿಗಳು ತಮ್ಮ ವೈಯಕ್ತಿಕ ಗಮನವನ್ನು ನೀಡಬೇಕೆಂದು ಕೋರಲಾಗಿದೆ. 2014-15ರ ಪರಿಷ್ಕೃತ ಅಂದಾಜುಗಳು ಮತ್ತು 2015-16ರ ಆಯವ್ಯಯ ಅಂದಾಜುಗಳೆರಡಕ್ಕೂ ವ್ಯತ್ಯಾಸಗಳನ್ನು ತೋರಿಸುವ ವಿವರಣಾ ಪಟ್ಟಿಯೊಂದಿಗೆ ಪೂರ್ಣಗೊಳಿಸಿದ ಮತ್ತು ಅಂತಿಮಗೊಳಿಸಿದ ಅಂದಾಜುಗಳನ್ನು "ಮೊದಲ ಆದ್ಯತೆ"ಯ ಮೇಲೆ ಸಂಬಂಧಿಸಿದ ಸಚಿವಾಲಯದ ಆಂತರಿಕ ಆರ್ಥಿಕ ಸಲಹೆಗಾರರ : ಸರ್ಕಾರದ ಕಾರ್ಯದರ್ಶಿಗಳ ಮೂಲಕ ಆರ್ಥಿಕ ಇಲಾಖೆಗೆ ನಿಗದಿತ ದಿನಾಂಕದಂದು ಅಂದರೆ 05ನೇ ನವೆಂಬರ್ 2014 ರಂದು ಅಥವಾ ಅದಕ್ಕೆ ಮೊದಲು ಕಳುಹಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಎಲ್ಲ ಆಯವ್ಯಯ ವಿವರಣೆಗಳನ್ನು ನಿಗದಿತ ದಿನಾಂಕ ಮೀರುವುದಕ್ಕೆ ಕಾಯದೆ, ಅದನ್ನು ಪೂರ್ಣಗೊಳಿಸಿದ ತಕ್ಷಣವೇ ಸರ್ಕಾರದ ಉಪ

ಕಾರ್ಯದರ್ಶಿ, (ಆ. ಮತ್ತು ಸಂ.) ಆರ್ಥಿಕ ಇಲಾಖೆ, ಇವರಿಗೆ ಕಳುಹಿಸಬೇಕು ಮತ್ತು ವೈಯಕ್ತಿಕ ಬಟವಾಡೆಗಳು ಯಾವುದಾದರೂ ಇದ್ದರೆ ಆರ್ಥಿಕ ಇಲಾಖೆಯ ಆಯವ್ಯಯ ಸಂಕಲನ ಮತ್ತು ಸಮಿತಿ ಶಾಖೆಗೆ ನೇರವಾಗಿ ತಲುಪಿಸಲು ವ್ಯವಸ್ಥೆ ಮಾಡಬೇಕೆಂದು ವಿನಂತಿಸಿದೆ. ನಿಗದಿತ ಅಂತಿಮ ದಿನಾಂಕದೊಳಗೆ ಮಾಹಿತಿ ನೀಡಲು ಇಲಾಖೆಗಳು ತಕ್ಷಣದಿಂದಲೇ ಅಧೀನ ಕಛೇರಿಗಳಿಂದ ಅಗತ್ಯವಿರುವ ಎಲ್ಲಾ ವಿವರಗಳನ್ನು ಪಡೆಯಲು ಪ್ರಾರಂಭಿಸಬಹುದು.

19. ನಿಗದಿತ ದಿನಾಂಕದೊಳಗೆ ಅಂದಾಜುಗಳನ್ನು ಕಳುಹಿಸುವಂತೆ ಅಂದಾಜುಗಳನ್ನು ತಯಾರಿಸುವ ಅಧಿಕಾರಿಗಳನ್ನು ಕೋರಲಾಗಿದೆ. ನಿಗದಿತ ದಿನಾಂಕದ ನಂತರ ಸ್ವೀಕರಿಸಿದ ಅಂದಾಜುಗಳನ್ನು ಪರಿಗಣಿಸುವುದಿಲ್ಲ ಮತ್ತು ಅಂದಾಜುಗಳನ್ನು ಆರ್ಥಿಕ ಇಲಾಖೆಯಲ್ಲಿ ಲಭ್ಯವಿರುವ ಮಾಹಿತಿಯ ಮೇರೆಗೆ ಅಂತಿಮಗೊಳಿಸಲಾಗುವುದು. ಆಯವ್ಯಯ ಅಂದಾಜುಗಳಲ್ಲಾಗುವ ಅನುದಾನದ ಕಡಿತಕ್ಕೆ ಮತ್ತು ಅಂದಾಜುಗಳು ಸೇರದಿರುವುದಕ್ಕೆ ಸಂಬಂಧಿಸಿದ ಇಲಾಖೆಗಳೇ ಹೊಣೆಗಾರರಾಗುತ್ತಾರೆ ಹಾಗೂ ಇಂತಹ ಲೋಪಗಳಿಗೆ 2015-16ರ ಪೂರಕ ಅಂದಾಜುಗಳಲ್ಲಿ ಅನುದಾನಕ್ಕಾಗಿ ಪರಿಗಣಿಸಲಾಗುವುದಿಲ್ಲ.

20. ನಮೂನೆಯನ್ನೊಳಗೊಂಡ ಈ ಸುತ್ತೋಲೆಯನ್ನು ವೆಬ್ ವಿಳಾಸ www.finance.kar.nic.in ದಿಂದಲೂ ಪಡೆಯಬಹುದಾಗಿದೆ.

**(ಅರವಿಂದ್ ಶ್ರೀವಾಸ್ತವ)**
ಸರ್ಕಾರದ ಕಾರ್ಯದರ್ಶಿ
ಆರ್ಥಿಕ ಇಲಾಖೆ.(ಆ. & ಸಂ.)

ಇವರಿಗೆ:-

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳಿಗೆ.
2. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಮತ್ತು ಆಯವ್ಯಯ ಅಂದಾಜು ತಯಾರಿಸುವ ಅಧಿಕಾರಿಗಳಿಗೆ.
3. ಸಚಿವಾಲಯದ ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರಿಗೆ.
4. ಎಲ್ಲಾ ಪ್ರಾದೇಶಿಕ ಆಯುಕ್ತರುಗಳಿಗೆ.
5. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಮತ್ತು ಮುಖ್ಯ ಲೆಕ್ಕಾಧಿಕಾರಿಗಳಿಗೆ.
6. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.
7. ಆರ್ಥಿಕ ಇಲಾಖೆಯ ಸರ್ಕಾರದ ಎಲ್ಲಾ ಅಪರ ಕಾರ್ಯದರ್ಶಿಗಳು, ಸಹ ಕಾರ್ಯದರ್ಶಿಗಳು, ಉಪ ಕಾರ್ಯದರ್ಶಿಗಳು, ವಿಶೇಷಾಧಿಕಾರಿಗಳು ಮತ್ತು ಅಧೀನ ಕಾರ್ಯದರ್ಶಿಗಳಿಗೆ.
8. ಆರ್ಥಿಕ ಇಲಾಖೆಯ ಎಲ್ಲಾ ಆಯವ್ಯಯ ತಯಾರಿಸುವ ಶಾಖೆಗಳಿಗೆ.
9. ಕಛೇರಿ ಪ್ರತಿ ಮತ್ತು ಹೆಚ್ಚುವರಿ ಪ್ರತಿಗಳು.

**ಅನುಬಂಧ**

**ಆಯವ್ಯಯ**

**ವೆಚ್ಚ**

2014-15 ರ ಪರಿಷ್ಕೃತ ಅಂದಾಜುಗಳು ಮತ್ತು 2015-16 ರ

| ಲೆಕ್ಕ ಶೀರ್ಷಿಕೆ | 2014-15ರ ಆಯವ್ಯಯ ಅಂದಾಜುಗಳು | 2014-15 ರಪರಿಷ್ಕೃತ ಅಂದಾಜು ಗಳು | ಆಯವ್ಯಯ ಅಂದಾಜುಗಳು ಮತ್ತು ಪರಿಷ್ಕೃತ ಅಂದಾಜುಗಳ ಮಧ್ಯೆ ವ್ಯತ್ಯಾಸಗಳು ಹೆಚ್ಚಳ / ಇಳಿತ | ವ್ಯತ್ಯಾಸಗಳಿಗೆ ಕಾರಣಗಳು |
|---|---|---|---|---|
| 1 | 2 | 3 | 4 | 5 |
| | | | | |

**ಅಂದಾಜುಗಳು**

**ಮುಖ್ಯ ಲೆಕ್ಕ ಶೀರ್ಷಿಕೆ**

ಆಯವ್ಯಯ ಅಂದಾಜುಗಳಲ್ಲಿ ವ್ಯತ್ಯಾಸಗಳನ್ನು ಸೂಚಿಸುವ ನಿರೂಪಣಾ ಪಟ್ಟಿ

| 2015-16ರ ಆಯವ್ಯಯದ ಅಂದಾಜುಗಳು | 2014-15 ರ ಪರಿಷ್ಕೃತ ಅಂದಾಜುಗಳು ಮತ್ತು 2015-16 ರ ಆಯವ್ಯಯ ಅಂದಾಜುಗಳ ಮಧ್ಯೆ ವ್ಯತ್ಯಾಸಗಳು ಹೆಚ್ಚಳ/ಇಳಿತ | ವ್ಯತ್ಯಾಸಗಳಿಗೆ ಕಾರಣಗಳು | ಆರ್ಥಿಕ ಇಲಾಖೆಯಲ್ಲಿ ಭರ್ತಿ ಮಾಡಲಾಗುವುದು | | |
|---|---|---|---|---|---|
| | | | 2013-14ರ ವಾಸ್ತವಿಕಗಳು | 2014-15ರ 6 ತಿಂಗಳ ವಾಸ್ತವಿಕಗಳು | ಆರ್ಥಿಕ ಇಲಾಖೆಯ ಅಭಿಪ್ರಾಯ |
| 6 | 7 | 8 | 9 | 10 | 11 |
| | | | | | |

**GOVERNMENT OF KARNATAKA**
**FINANCE DEPARTMENT**

**Budget**
**Top Priority**

Karnataka Government Secretariat
Room No.257, Vidhana Soudha

No. FD11 BPE 2014. Bangalore, Dated: 30th October 2014.

# CIRCULAR

Subject:- Budget 2015-16-Preparation of Expenditure Estimates reg. (Other than Appendix-B).

* * *

Reference is invited to the Budget Calendar for 2015-16 issued in Official Memorandum No. FD 08 BPE 2014 dated:20-10-2014. The form for explaining the variations between 2014-15 BE and 2014-15 RE and 2014-15 RE and 2015-16 BE is here with enclosed as Annexure. Required number of copies of this annexure should be made by the Estimating Officers at their own end.

2. The Chief Accounts Officers of Zilla Panchayats are treated as Estimating Officers. The estimates may be got typed/ computerized Major Head-wise. Breakup up to the detailed head level should be given for Revised Estimates for 2014-15 and Budget Estimates for 2015-16 under each scheme. Separate sheets should be used for each Major Head.

3. The Estimating Officers are requested to frame the Revised Estimates for the current year with reference to the actuals of the preceding years, the actuals of the first 6 months of the current year and the probable expenditure for the remaining six months. The variations between the 2014-15 BE and 2014-15 RE should be explained. Where increases are permitted by Government, reference to the Government Order in which increases were sanctioned / authorized should invariably be quoted.

4. The Estimates to be proposed for 2015-16 should be based on the actuals for the preceding years and also on the proposed RE 2014-15. The variations between the 2014-15 RE and the 2015-16 BE should be explained. Reasons for variations

should be specified and only the bare minimum requirements should be provided, keeping in view the instructions issued from time to time regarding the measures to enforce economy in expenditure and the general need for economy particularly under non-plan items. The Estimating and Controlling Officers should bestow their personal attention to this matter.

5. It may be noted that mere inclusion of increased provision in the Revised Estimates carries with it no authority for incurring additional expenditure and does not dispense with obligation on the part of the Departments to obtain necessary supplementary grants or re-appropriations, nor are the Revised Estimates, the proper channel for such application for additional allotments. Therefore, Re-appropriations or Supplementary grants will not be sanctioned, unless separate proposals are received in the Finance Department.

6. Anticipated savings which are not required to cover the excesses under other heads within the same grant should be surrendered to Government and such savings have to be taken into account while fixing the Revised Estimates for the current financial year. In no case should such savings be kept in the Personal Deposit Account of the Departments to avoid lapse of grants. In the event of such a contingency, specific order of Government in the Finance Department should be taken.

7. **Budget Accuracy**:- Instances have occurred in the past, where substantial amounts are being surrendered either as a result of inclusion of provision in the budget in excess of the requirement or due to non implementation of the schemes provided for in the Budget. There have also been cases where, in the very first quarter of the financial year, the departments have approached Government for provisions of additional funds for certain items which they had not originally anticipated. Instances have also come to the notice of Government where the Departments have spent a major portion of the entire Budget provision within a couple of months and have approached the Finance Department for additional allotment. These instances should be avoided and Budget Estimates prepared with due care and forethought. Proposals should not, therefore, be based on hypothetical estimates but must be worked out on the basis of probable and realistic requirement of funds. This would avoid large variations between the Budget Estimates and the actual expenditure. The expenditure against the Budget provisions in all the months should be at an even rate and there should not be any abnormal expenditure in the last quarter of the financial year.

8. The year 2015-16 is the fourth year of XII Five year Plan.

9. It should be noted that **Budget Control** by treasuries have been introduced. Hence, all the items of expenditure are to be classified properly under the relevant head of account. In the absence of proper classification, the treasuries will not be honouring the bills.

10. As soon as the Planning Department communicates the Sectoral Outlay for State Plan 2015-16, the Departments should work out the schematic breakup. The State component and the CSS/CPS components as the case may be, should be distinctly shown against each scheme. The provision for CSS/CPS schemes should be accurately made based on the scheme guidelines. **Such schematic breakup should be furnished to Finance Department within Five Days of communication of Sectoral Outlay by Planning Department. No separate instructions will be issued in this regard by Finance Department.**

11. All SCP / TSP outlays have to be classified under 786-Special Component Plan and 796-Tribal Sub Plan below the functional Major Heads and the corresponding object/detailed heads are 422 and 423.

12. Pre-budget scrutiny of new schemes:- The Internal Financial Adviser system has been introduced in most of the Secretariat Departments. One of the main functions of Internal Financial Adviser is to undertake pre-budget scrutiny of new schemes. Though this system is functioning from number of years, proposals are not being sent by Heads of Departments for undertaking pre-budget scrutiny. The Public Accounts Committee has time and again brought to the notice of Finance Department the need for pre-budget scrutiny and it is insisting for its adoption. Heads of Department should send new plan schemes including new buildings proposed to be taken up during 2015-16 for pre-budget scrutiny well in time before submission of estimates. For this purpose, they may first address the concerned Secretaries to Government having Internal Financial Adviser system who in turn after scrutiny by the Internal Financial Adviser, will forward it to Planning Department and Finance Department for approval and clearance of the scheme and inclusion in the budget estimates. In respect of Departments where Internal Financial Adviser system has not yet been introduced, proposals for pre-budget scrutiny may be sent to the concerned Secretaries to Government on or before 30-11-2014 even if the plan allocation of the item / scheme is not known. This type of Pre-budget Scrutiny will avoid detailed examination of the

proposals / Schemes at a later date and the schemes could be implemented in the beginning of the financial year itself.

13. Lands are being acquired for various activities of the Departments. The land holders usually approach courts for higher compensation. The Court decrees are to be fulfilled expeditiously. The Zilla Panchayats and the concerned Departments under State Sector have to propose sufficient provisions in their Budget Estimates to satisfy court decrees depending upon the cases on hand. The decrees are to be treated as "Charged" on the Consolidated Fund.

14. In case of Buildings the following instructions are issued.-

(i) Provision for all buildings will be made under 'Plan' only. All departments including non-developmental departments such as Revenue, Judiciary, Police, Commercial Taxes etc., should get plan allocation for their requirements for buildings from the Planning Department. Planning Department is required to call for proposals from Non-Developmental Departments also and provide necessary plan allocations.

(ii) The departments concerned should allocate sufficient amount out of their Plan allocation for buildings. While doing so, the Department concerned should take into account buildings that are already under construction and provide for new works after allocating sufficient amounts for works under progress. The Chief Engineer (C & B) should furnish a list of works in progress with Revised Estimates of 2014-15 to the concerned Heads of Departments who will be responsible for providing necessary and sufficient funds under plan. The list of works and the estimates should be sent to Finance Department / Internal Financial Adviser along with the plan budget estimates. In accordance with the decision taken by Government, sufficient provision should be made so as to complete the work as per codal provisions. No token provision will be allowed.

15. In the case of execution of Buildings, Roads and Bridges etc., for which the Chief Engineer (Communication and Buildings) is responsible, he should see that no new works are entered in the Appendix 'E' unless Plan and Estimates have been approved administratively and sanctioned technically by the competent authority. In the matter of allocation of Budgetary provision between works in progress and fresh works to be taken up for execution, care should be taken to see that sufficient amounts are set apart for the on going works in order to complete them early, and in less than 2 years in any case. Accordingly, allocation of minimum 40% and 60% of the balance cost should

be provided in 2015-16 & 2016-17 Budget. Only thereafter provisions may be proposed for fresh works. For this purpose a priority list may be prepared and sent to Government for consideration.

16. In respect of fresh works with estimates of less than Rs.5.00 crore, there should be a minimum provision of 40% in the first year; and such works should be completed in the second year by providing the remaining 60% of the required amount. In respect of works with estimates of more than Rs.5.00 crore, budget allocation of minimum 30% should be made during the first year. The balance cost of 70% should be provided in the next two years as per the implementation schedule. No token budget allotment shall be made and works included in Appendix 'E'.

17. With regard to Minor Irrigation Works, the Chief Engineers, Minor Irrigation and the Chief Engineer, Panchayat Raj Engineering Department, shall see that only such works which have been administratively approved by competent authority are provided for and entered in the Appendix 'E'. Before provision is earmarked in the budget for new Minor Irrigation works from out of the Irrigation Plan allocation, sufficient care should be taken to see that necessary funds are provided for the works which are already taken up for execution and are in various stages of progress.

18. The Heads of Departments, Regional Commissioners, Deputy Commissioners, Chief Engineers and other Estimating Officers are requested to bestow their personal attention to the preparation of these Estimates and ensure that they are sent on a "TOP PRIORITY" basis in complete and final form supported by the statement showing variations both for the Revised Estimates for 2014-15 and for the Budget Estimates for 2015-16, through the concerned Secretariat Internal Financial Adviser / Secretaries to Government, to the Finance Department on or before the due date fixed viz., 05$^{th}$ November, 2014. All Budget returns to be sent to Finance Department may be addressed to Deputy Secretary to Government (B & R), Finance Department and personal deliveries if any may kindly be arranged to be delivered directly in the Budget Compilation and Committee Section of Finance Department as soon as they are complete without waiting for expiry of prescribed date. The Department may collect all the necessary particulars from the Subordinate Offices from now itself to ensure strict adherence of the due dates.

19. All the Estimates preparing Officers are requested to see that the Estimates are forwarded to Government not later than the due dates fixed. The Estimates received after the due date will not be considered and estimates will be finalized on the basis of the information available in the Finance Department. Any short fall in the provision or omission in the Budget will be the responsibility of the Departments concerned and supplementary grants for such omissions will not be entertained during 2015-16.

20. This Circular as well as the Annexure is available on the website **www.finance.kar.nic.in**



**(ARVIND SHRIVASTAVA)**
Secretary to Government,
Finance Department ( B.& R.)

To:

1. All the Principal Secretaries and Secretaries to Government
2. All Heads of Departments and Estimating Officers
3. The Internal Financial Advisers of the Secretariat
4. All Regional Commissioners
5. All Chief Executive Officers and C.A.O.s of Zilla Panchayats.
6. Deputy Commissioners of all Districts.
7. All Additional Secretaries, Joint Secretaries, Deputy Secretaries, Special Officers and Under Secretaries to Government in Finance Department.
8. All Budget Compiling Sections in Finance Department.
9. Office Copy and Additional Copies.

**Annexure**

**Budget**

**Expenditure**

Statement showing the variations in revised estimates for the year 2014-15 and

| Head of Account | Budget Estimates 2014-15 | Revised Estimates 2014-15 | Variations between Budget Estimates and Revised Estimates Increase / Decrease | Reasons for Variations |
|---|---|---|---|---|
| 1 | 2 | 3 | 4 | 5 |
| | | | | |

**Estimates** **Major Head of Account**

Budget Estimates for the year 2015-16

| Budget Estimates 2015-16 | Variations between Revised Estimates 2014-15 and Budget Estimates 2015-16 Increase / Decrease | Reasons for Variations | will be filled at Finance Department | | |
|---|---|---|---|---|---|
| | | | Accounts 2013-14 | Accounts for 6 months 2014-15 | Opinion of Finance Depart-ment |
| 6 | 7 | 8 | 9 | 10 | 11 |
| | | | | | |